ವಿಪರೀತವಾಗಿ ಸಂಭ್ರಮಿಸಿದ್ದು, ಅದನ್ನು ಕೊಹ್ಲಿ ಟೀಕಿಸಿದ್ದು ಕೂಡ ಸುದ್ದಿಯಾಯಿತು. ಭಾರತದಂತಹ ಬಲಾಢ್ಯ ತಂಡದ ಅಪಾಯಕಾರಿ ಟೆಸ್ಟ್ ಬ್ಯಾಟ್ಸ್‌ಮನ್‌ಗಳನ್ನೆಲ್ಲ ಅಷ್ಟು ಕಡಿಮೆ ಮೊತ್ತಕ್ಕೆ ಕಟ್ಟಿಹಾಕಿದ ಮೇಲೆ ಬಾಂಗ್ಲಾ ಉತ್ಸಾಹ ಇಮ್ಮಡಿಯಾಗುವುದು ಸಹಜವೇ.

ಭಾರತ ಹಾಗೂ ಬಾಂಗ್ಲಾದೇಶದ ಸರಣಿಯಲ್ಲಿ ಎರಡು ಮುಖ್ಯವಾದ ಅಂಶಗಳನ್ನು ನಾವು ಎತ್ತಿಕೊಳ್ಳಬೇಕು. ಲಿಟನ್ ದಾಸ್ ಹಾಗೂ ಮೆಹೆದಿ ಹಸನ್ ಇಬ್ಬರೂ ಬಾಂಗ್ಲಾ ಕ್ರಿಕೆಟ್‌ನ ಮ್ಯಾಚ್‌ವಿನ್ನರ್‌ಗಳಾಗುವ, ಚಿಕ್ಕ ವಯಸ್ಸಿನಲ್ಲೇ ದೊಡ್ಡವರಿಗೂ ಪಾಠ ಹೇಳಬಲ್ಲ ಪ್ರತಿಭೆ ಇರುವ ಆಟಗಾರರು ಎನ್ನುವುದು, ಒಂದು. ಭಾರತದ ಮೇಲಿನ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಮನೋಬಲ ಕ್ಷೀಣಿಸಿದೆ ಎನ್ನುವುದು, ಇನ್ನೊಂದು.



ಬಾಂಗ್ಲಾ ಕ್ರಿಕೆಟ್‌ನ ಎರಡು ನಕ್ಷತ್ರಗಳು: ಲಿಟನ್ ದಾಸ್ ಹಾಗೂ ಮೆಹೆದಿ ಹಸನ್

ಭಾರತವು ಚತ್ತೋಗ್ರಾಮದಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ 188 ರನ್‌ಗಳ ದೊಡ್ಡ ವಿಜಯ ಪಡೆಯಿತೆನ್ನುವುದೇನೊ ನಿಜ. ಹಾಗಿದ್ದೂ ಎರಡೂ ಟೆಸ್ಟ್‌ಗಳ ಯಾವ ಇನಿಂಗ್ಸ್‌ನಲ್ಲೂ ಮೊದಲ ವಿಕೆಟ್‌ಗೆ 100 ರನ್‌ಗಳ ಜತೆಯಾಟ ಬರಲಿಲ್ಲ. ಭಾರತದ ಆರಂಭಿಕ ಜೋಡಿ ಲಯದಲ್ಲಿ ಇಲ್ಲವೆನ್ನುವುದಕ್ಕೆ ಇದೇ ಪುಷ್ಟಿ. ಮೊದಲ ಟೆಸ್ಟ್‌ನ ಪ್ರಥಮ ಇನಿಂಗ್ಸ್‌ನಲ್ಲಿ ಚೇತೇಶ್ವರ ಪೂಜಾರ 203 ಎಸೆತಗಳ ತಮ್ಮ ಗತವೈಭವದ ತಾಳ್ಮೆಯ ಆಟವಾಡಿದರು. ಅವರು 90 ರನ್ ಗಳಿಸಿದ್ದು ಹಾಗೂ ಶ್ರೇಯಸ್ ಅಯ್ಯರ್ 86 ರನ್ ಹೊಡೆದು, ಅವರಿಗೆ ಸಾಥ್ ನೀಡಿದ್ದು ತಂಡಕ್ಕೆ ಜೀವಾನಿಲವಾಗಿ ಒದಗಿಬಂತು. ಎರಡನೇ ಇನಿಂಗ್ಸ್‌ನಲ್ಲಿ ರಾಹುಲ್ ಹಾಗೂ ಶುಭಮನ್ ಗಿಲ್ ಇಬ್ಬರಿಗೂ ಆತ್ಮವಿಶ್ವಾಸ ತುಂಬಲು ಕಾರಣವಾದದ್ದು ಕೂಡ ಪೂಜಾರ ಹಾಗೂ ಶ್ರೇಯಸ್ ಲಯ ಎನ್ನುವುದರಲ್ಲಿ ಸಂಶಯವಿಲ್ಲ.

ತಾಂತ್ರಿಕವಾಗಿ ಸಶಕ್ತವಾದ ರಾಹುಲ್ ಹಾಗೂ ಶುಭಮನ್ ಗಿಲ್ ಮನೋಭೂಮಿಕೆ ಸರಿಯಾಗಿಲ್ಲ ಎನ್ನುವುದಕ್ಕೆ ಬಾಂಗ್ಲಾ ಟೆಸ್ಟ್ ಸರಣಿ ಅನೇಕ ಉದಾಹರಣೆಗಳನ್ನು ಒದಗಿಸಿತು. ಅದರಲ್ಲೂ ಎರಡನೇ ಟೆಸ್ಟ್‌ನ ಕೊನೆಯ ಇನಿಂಗ್ಸ್‌ನ ಸ್ಪಿನ್ನರ್‌ಸ್ನೇಹಿ ಪರಿಸ್ಥಿತಿಯಲ್ಲಿ ಆಡಿದ ರೀತಿ. ಅದೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲೂ ಭಾರತದ ರಾಹುಲ್ ತಂಡದ ಮೊತ್ತ 27 ರನ್ ಆಗಿದ್ದಾಗ ವಿಕೆಟ್ ಒಪ್ಪಿಸಿದ್ದರು. ಗಿಲ್ ಕೂಡ ತಡಕಾಡಿದ್ದರು.

ಟೆಸ್ಟ್ ಕ್ರಿಕೆಟ್‌ಗೆ ತಮ್ಮ ಜಾಯಮಾನ ಹೇಳಿ ಮಾಡಿಸಿದ್ದು ಎನ್ನುವುದನ್ನು ಪೂಜಾರ ಈ ಸರಣಿಯಲ್ಲಿ ರುಜುವಾತು ಪಡಿಸಿದ್ದೇನೊ ನಿಜ. ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದೇ ಅವರೆನ್ನುವುದು ಇದಕ್ಕೆ ಉದಾಹರಣೆ. 222 ರನ್‌ಗಳನ್ನು ಅವರು ಸರಣಿಯಲ್ಲಿ ಕಲೆಹಾಕಿದರು. ಅವರ ನಂತರದ ಸ್ಥಾನ ಶ್ರೇಯಸ್ ಅಯ್ಯರ್ (202) ಅವರದ್ದು. ಬಾಂಗ್ಲಾದೇಶದ ಪರ ಪದಾರ್ಪಣೆ ಮಾಡಿದ ಜಾಕಿರ್ ಹಸನ್ 186 ರನ್ ಜೋಡಿಸಿ, ತಾಳ್ಮೆಯ ಪಾಠ ಮಾಡಿದ್ದು ವಿಶೇಷ.

ಭಾರತದ ಮೇಲಿನ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ತಡಕಾಡುತ್ತಿರುವುದಕ್ಕೆ ಸರಣಿಯಲ್ಲಿ ಕೆಲವು ನಮೂನೆಯ ಉದಾಹರಣೆಗಳು ಸಿಕ್ಕಿವೆ. ರಿಷಬ್ ಪಂತ್ ತರಹದ ದಾಳಿಕೋರ ತಮ್ಮ ಸಹಜ ಆಟವನ್ನು ಆಡುತ್ತಾರಾದರೂ, ಅವರನ್ನು ನೆಚ್ಚಿಕೊಳ್ಳುವಂತಿಲ್ಲ ಎನ್ನುವುದನ್ನೂ ಸರಣಿ ಸ್ಪಷ್ಟಪಡಿಸಿತು. ಒತ್ತಡ ವಿಪರೀತವಾದರೆ ಪೂಜಾರ ಸಹ ವಿಚಲಿತರಾಗುತ್ತಾರಾ ಎನ್ನುವ ಪ್ರಶ್ನೆಯಂತೂ ಕಳೆದ ಎರಡು ವರ್ಷಗಳಿಂದ ತಂಡಕ್ಕೆ ಕಾಡತೊಡಗಿದೆ.

ಬೌಲಿಂಗ್ ವಿಭಾಗದಲ್ಲಿ ಕುಲದೀಪ್ ಯಾದವ್ ಮೊದಲ ಟೆಸ್ಟ್‌ನಲ್ಲಿ ಮಿಂಚಿ ಎಂಟು ವಿಕೆಟ್ ಪಡೆದರು. ಅವರನ್ನು ಎರಡನೇ ಟೆಸ್ಟ್‌ನಲ್ಲಿ ಕೂರಿಸಿದ್ದು ವಿವಾದವಾಗಲು ಇನ್ನೇನು ಕಾರಣ ಬೇಕು? 12 ವರ್ಷಗಳ ನಂತರ ಜಯದೇವ ಉನದ್ಕತ್ ಅವರಿಗೆ ಟೆಸ್ಟ್ ಆಡಲು ಚೆಂಡು ಕೊಟ್ಟಿದ್ದನ್ನು ಗೇಲಿ ಮಾಡಿದವರೂ ಕಡಿಮೆಯೇನಿಲ್ಲ. ಮೆಹೆದಿ ಹಸನ್ ಸಶಕ್ತ ಆಫ್‌ಸ್ಪಿನ್ ಬೌಲಿಂಗ್‌ನ ಪ್ರಾತ್ಯಕ್ಷಿಕೆ ಕೊಟ್ಟಿದ್ದು ಸುಳ್ಳಲ್ಲ. ಅದಕ್ಕೇ ಅವರಿಗೆ 11 ವಿಕೆಟ್‌ಗಳು ಸರಣಿಯಲ್ಲಿ ಸಂದವು. ಅಕ್ಷರ್ ಪಟೇಲ್ ಎಡಗೈ ಬ್ಯಾಟಿಂಗ್ ಕೂಡ ತಂಡದ ನೆರವಿಗೆ ಆಗೀಗ ಬರುತ್ತಿದೆ. ಬೌಲಿಂಗ್‌ನಲ್ಲೂ ಅವರು ಲಯ ಬಿಟ್ಟುಕೊಡದೆ ಎಂಟು ವಿಕೆಟ್ ಪಡೆದದ್ದು ಸಮಾಧಾನದ ಸಂಗತಿ.

ಭಾರತವು ಬಾಂಗ್ಲಾ ಎದುರಿನ ಏಕದಿನ ಪಂದ್ಯಗಳ ಸರಣಿಯನ್ನು ಸೋತಾಗ ವೀರೇಂದ್ರ ಸೆಹ್ವಾಗ್, 'ಕ್ರಿಪ್ಟೊ ಕರೆನ್ಸಿ ಮೌಲ್ಯ ಕುಸಿಯುತ್ತಿದೆಯಲ್ಲ, ಆ ಮಟ್ಟಕ್ಕೆ ತಂಡದ ಪರಿಸ್ಥಿತಿಯೂ ಕುಸಿದಿದೆ' ಎಂದು ಟ್ವೀಟ್ ಮಾಡಿದ್ದರು. ಓಬೀರಾಯನ ಕಾಲದ ತಂತ್ರದಲ್ಲಿ ಹೀಗೆಯೇ ಆಡುತ್ತಾ ಹೋದರೆ ಪರಿಸ್ಥಿತಿ ಗೋವಿಂದ ಎಂದು ಕರ್ನಾಟಕದವರೇ ಆದ ವೆಂಕಟೇಶ್ ಪ್ರಸಾದ್ ಕೂಡ ಟೀಕಾಪ್ರಹಾರ ಮಾಡಿದರು.

ಭಾರತದ ಏಕದಿನ ತಂಡದ ಬಿರುಕುಗಳನ್ನು ಬಾಂಗ್ಲಾ ಆಟಗಾರರ ಉತ್ಕಟತೆ ಇನ್ನಷ್ಟು ಅಗಲ ಮಾಡಿ ತೋರಿಸಿದ್ದು ಕಣ್ಣಿಗೆ ಕಟ್ಟಿದಂತಿದೆ. ವಿರಾಟ್ ಕೊಹ್ಲಿ ಫಾರ್ಮ್‌ಗೆ ಮರಳಿದರಲ್ಲ ಎಂದು ನೆಮ್ಮದಿಯ ನಿಟ್ಟುಸಿರುಬಿಡುವ ಹೊತ್ತಿಗೆ ಹೀಗೆ ಏನೇನೆಲ್ಲ ಆಗುತ್ತಿವೆ.

ಸೆಹ್ವಾಗ್ ದಾಳಿಕೋರತನ, ಗೌತಮ್ ಗಂಭೀರ್ ಹಟಮಾರಿ ಮುಖ, ಸೌರವ್ ಗಂಗೂಲಿ ಧಾರ್ಷ್ಟ್ಯ, ಸಚಿನ್ ತೆಂಡೂಲ್ಕರ್ ಮಾಸ್ಟರ್ ಕ್ಲಾಸ್, ರಾಹುಲ್ ದ್ರಾವಿಡ್ ಎಂಬ ಗಟ್ಟಿಗೋಡೆಯ ನೆಚ್ಚುಗೆ, ವಿವಿಎಸ್ ಲಕ್ಷ್ಮಣ್ ತರಹದ ಮಣಿಕಟ್ಟಿನ ಸೊಗಸಾಟದ ದಿಗ್ಗಜ, ಎಲ್ಲರ ಆಟಗಳಿಂದಲೇ ಏನೇನೋ ಒಂಚೂರನ್ನು ಪಡೆದುಕೊಂಡಂತೆ ಬೇರುಬಿಡುತ್ತಿದ್ದ ಚೇತೇಶ್ವರ ಪೂಜಾರ... ಇವರೆಲ್ಲರಿಂದ ಭಾರತದ ಅನುಭವಿ, ಯುವ ಬ್ಯಾಟ್ಸ್‌ಮನ್‌ಗಳು ಕಲಿಯುವುದು ಇನ್ನೂ ಇದೆ.

ಟ್ವೆಂಟಿ 20 ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾರತ ಐಪಿಎಲ್ ಶುರುವಾದ ಮೇಲೆ ಒಮ್ಮೆಯೂ ಗೆದ್ದಿಲ್ಲ. ಏಕದಿನ ಪಂದ್ಯದಲ್ಲಿ ಒತ್ತಡದ ಭಾರತವನ್ನು ಸದಾ ಮೈಮೇಲೆ ಎಳೆದುಕೊಂಡಂತೆ ನಿಲ್ಲುತ್ತಿದೆ. ಈಗ ಟೆಸ್ಟ್‌ನಲ್ಲೂ ತಡಕಾಟದ ಏದುಸಿರು. ಎದುರಲ್ಲಿ ಇರುವ ಸವಾಲುಗಳ ರಾಶಿಯನ್ನು ಭಾರತ ಕ್ರಿಕೆಟ್ ಹೇಗೆ ಕರಗಿಸುವುದೋ, ನೋಡಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in